ಇದೆ. ಈಗ ಎಲ್ಲಾ job training ನಲ್ಲಿದ್ದಾರೆ. ಅದು ಆದತಕ್ಷಣ ಎಲ್ಲಾ ಜಿಲ್ಲೆಗಳಿಗೂ ಕೂಡ ಕೊಡುತ್ತೇವೆ.

ಜಿಲ್ಲಾ ಕಛೇರಿ ನಿರ್ಮಾಣ

222(2135); ಶ್ರೀ ಲೋಬೋ ಜೆ.ಆರ್.(ಮಂಗಳೂರು ನಗರ ದಕ್ಷಿಣ)

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೊಸದಾಗಿ ಜಿಲ್ಲಾ ಕಛೇರಿ ಸಂಕೀರ್ಣ ನಿರ್ಮಾಣ ಮಾಡುವ ಉದ್ದೇಶ ಸರ್ಕಾರಕ್ಕಿದೆಯೇ:

ಆ) ಹಾಗಿದ್ದಲ್ಲಿ, ನಿರ್ಮಾಣಕ್ಕೆ ಅನುದಾನವನ್ನು ಮೀಸಲಾಗಿಡಲಾಗಿದೆಯೇ; ನಿರ್ಮಾಣಕ್ಕಾಗಿ ಜಮೀನನ್ನು ಗುರುತಿಸಲಾಗಿದೆಯೇ; ಎಲ್ಲಿ ಮತ್ತು ಎಷ್ಟು ಜಮೀನುಗಳನ್ನು ಗುರುತಿಸಲಾಗಿದೆ (ಸಂಪೂರ್ಣ ವಿವರ ನೀಡುವುದು)?

ಶ್ರೀ ವಿ. ಶ್ರೀನಿವಾಸ ಪ್ರಸಾದ್: (ಮಾನ್ಯ ಕಂದಾಯ ಸಚಿವರು)

ಅ) ಹೌದು.

ದಕ್ಷಿಣ ಕನ್ನಡ ಜಿಲ್ಲೆಯ ಬಂಗ್ರಕೂಳೂರು ಗ್ರಾಮದ ಸರ್ವೆ ನಂ.38–1ಎ ರಲ್ಲಿ 4–50 ಎಕರೆ ಜಮೀನಿನಲ್ಲಿ ಜಿಲ್ಲಾ ಸಂಕೀರ್ಣ ಕಟ್ಟಡ ನಿರ್ಮಾಣ ಮಾಡಲು ` 23.00 ಕೋಟಿಯ ಅಂದಾಜು ಪಟ್ಟಿಯನ್ನು ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು ಇವರು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ ಸದರಿ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಕಂದಾಯ ಇಲಾಖೆಯಲ್ಲಿ ಜಿಲ್ಲಾ ಕಛೇರಿ ಸಂಕೀರ್ಣ ಕಟ್ಟಡ ಕಾಮಗಾರಿಗಳ ನಿರ್ಮಾಣವು ಮುಂದುವರೆದ ಯೋಜನೆಯಾಗಿರುತ್ತದೆ. ಈ ಉದ್ದೇಶಕ್ಕೆ ಪ್ರತಿ ಸಾಲಿನಲ್ಲಿ ಅನುದಾನ ಒದಗಿಸಲಾಗುತ್ತಿದೆ. ಪ್ರಸಕ್ತ ಸಾಲಿನಲಿ ` 30.00 ಕೋಟಿಗಳ ಅನುದಾನ ಒದಗಿಸಲಾಗಿರುತ್ತದೆ.

ಈ ಹಿಂದೆ ಗುರುತಿಸಲಾದ ಬಂಗ್ರಕೂಳೂರು ಗ್ರಾಮದ ಸರ್ವೆ ನಂ.38/ಎ ರ 4.50 ಎಕರೆ ಜಮೀನು ಮುಳುಗಡೆ ಪ್ರದೇಶಕ್ಕೆ

ಹತ್ತಿರವಾಗುವುದರಿಂದ ಜಿಲ್ಲಾ ಕಛೇರಿಗಳ ಸಂಕೀರ್ಣ ಕಟ್ಟಡಕ್ಕೆ ಸೂಕ್ತವಾಗಿರುವುದಿಲ್ಲವೆಂದು ಕಂಡು ಬಂದ ಹಿನ್ನೆಲೆಯಲ್ಲಿ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಿಗೆ ಉತ್ತಮ ಸಾರಿಗೆ ಸಂಪರ್ಕ ಹೊಂದಿರುವಂತಹ ಮಂಗಳೂರು ತಾಲ್ಲೂಕು, ಅಳಪೆ ಗ್ರಾಮದ ಪಡಿಲು ಎಂಬಲ್ಲಿ ಕರ್ನಾಟಕ ಅರಣ್ಯ ಕೈಗಾರಿಕಾ ನಿಗಮಕ್ಕೆ ಸಂಬಂಧಿಸಿದ ಸರ್ವೆ ನಂ.20 ರಲ್ಲಿ 10–05 ಎಕರೆ ಜಮೀನನ್ನು ಜಿಲ್ಲಾ ಕಛೇರಿ ಸಂಕೀರ್ಣ ನಿರ್ಮಾಣಕ್ಕೆ ಸೂಕ್ತವೆಂದು ಗುರುತಿಸಿ, ಜಿಲ್ಲಾ ಪ್ರಗತಿ ಪರಿಶೀಲನಾ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗಿದೆ. ಜಿಲ್ಲಾಧಿಕಾರಿಗಳಿಂದ ಪರಿಷ್ಕೃತ ಅಂದಾಜು ಪಟ್ಟಿ ಮತ್ತು ನಕ್ಷೆ ಸ್ವೀಕೃತವಾದ ಕೂಡಲೇ ಆಡಳಿತಾತ್ಮಕ ಅನುಮೋದನೆ ನೀಡಲು ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಜೆ.ಆರ್. ಲೋಬೋ:– ಮಾನ್ಯ ಅಧ್ಯಕ್ಷರೆ, ನನಗೆ ಉತ್ತರ ದೊರಕಿದೆ. ಹಿಂದೆ ಜಿಲ್ಲಾ ಕಛೇರಿ ಸಂಕೀರ್ಣ ನಿರ್ಮಾಣ ಮಾಡುವುದಕ್ಕೆ ಮೊದಲು ಬೇರೆ ಕಡೆ ಜಾಗವನ್ನು ಹುಡುಕಿದ್ದು, ಈಗ ಅರಣ್ಯ ಇಲಾಖೆಯ ಜಾಗವನ್ನು ಗುರುತಿಸಿದ್ದಾರೆಂದು ಹೇಳುತ್ತಿದ್ದಾರೆ. ಇದಕ್ಕೆ ಅರಣ್ಯ ಇಲಾಖೆಯ ಜಾಗವನ್ನು ಗುರುತಿಸಿದ್ದು, ಇದು ಸದ್ಯಕ್ಕೆ ಮಾಡುವುದಕ್ಕೆ ಸಾಧ್ಯವಿದೆಯೇ? ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಅದಕ್ಕೆ ಜಾಗ ಸಿಕ್ಕಿದೆಯಾ? ಜಿಲ್ಲಾ ಸಂಕೀರ್ಣ ನಿರ್ಮಾಣವಾಗುವುದು ಯಾವಾಗ ಎಂದು ಮಾನ್ಯ ಕಂದಾಯ ಸಚಿವರನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು:– ಇದು ಗೃಹ ಮಂಡಳಿಗೆ ಹೇಗೆ ಸಂಬಂಧಪಡುತ್ತದೆ?

ಶ್ರೀ ವಿ.ಶ್ರೀನಿವಾಸ್ ಪ್ರಸಾದ್:– ಇದು ಅರಣ್ಯ ಇಲಾಖೆಯದು.

ಅಧ್ಯಕ್ಷರು:– ಜಿಲ್ಲಾ ಕಛೇರಿ ಸಂಕೀರ್ಣ ನಿರ್ಮಾಣ ಮಾಡಬೇಕೆಂದು ಕೇಳಿದ್ದಾರೆ. ಇದು ಗೃಹ ಮಂಡಳಿಗೆ ಹೇಗೆ ಸಂಬಂಧ ಬರುತ್ತದೆ. ಕಟ್ಟುವುದು ಬೇರೆ, ಆದರೆ ದುಡ್ಡು ಕೊಡುವುದು ಇವರೇ ಅಲ್ಲವೇ?

ಶ್ರೀ ವಿ. ಶ್ರೀನಿವಾಸ್ ಪ್ರಸಾದ್:– ಹೌದು, ಅವರು ಏಜೆನ್ಸಿ, ಕೆಲಸ ಅವರಿಗೆ ಕೊಡುವುದು, ನಾವು ದುಡ್ಡು ಕೊಡುವುದು.

ಅಧ್ಯಕ್ಷರು:– ಏಜೆನ್ಸಿ PWD ಯವರು ಇಲ್ಲವೇ? ಆಯಿತು, ಹೇಳಿ.

ಶ್ರೀ ವಿ.ಶ್ರೀನಿವಾಸ್ ಪ್ರಸಾದ್:– ಹೌಸಿಂಗ್ ಬೋರ್ಡ್‌ನವರು ಏಜೆನ್ಸಿ, ನಾವು ದುಡ್ಡು ಕೊಡುವವರು. ಜಿಲ್ಲಾ ಸಂಕೀರ್ಣ ಕಚೇರಿಗೆ ಬಂಗ್ರಕೂಳೂರು ಎಂಬಲ್ಲಿ ಜಾಗ ಕೊಟ್ಟಿದ್ದರು, ಅಲ್ಲಿ 23 ಕೋಟಿ ರೂಪಾಯಿಗೆ ಅಂದಾಜು ಪಟ್ಟಿ ಮಾಡಿ, ಆಯುಕ್ತರು, ಕರ್ನಾಟಕ ಗೃಹ ಮಂಡಳಿಗೆ ಕೊಟ್ಟಿತ್ತು. ಈ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿತ್ತು. ಈಗ ಏನಾಗಿದೆ ಎಂದರೆ ಅಲ್ಲಿ ಅದು ಸೂಕ್ತ ಜಾಗ ಅಲ್ಲವೆಂದು ಹೇಳಿ, ಅದಕ್ಕೆ alternative place ಕೊಡಿ ಎಂದು ಹೇಳಿದ್ದಾರೆ. ಅದಕ್ಕೆ forest departmentನಲ್ಲಿ ಜಾಗವನ್ನು ಗುರುತು ಮಾಡಿ ಹತ್ತು ಎಕರೆ ಜಮೀನು ಕೊಡಿಸುವುದಕ್ಕೆ ವ್ಯವಸ್ಥೆಯನ್ನು ಮಾಡಿದ್ದೇವೆ. ಈಗಾಗಲೇ ಇದರ estimate, plan and design ಬಂದ ತಕ್ಷಣ ಅದಕ್ಕೆ administrative approval ಕೊಡುತ್ತೇವೆ. ಅದು ಎಲ್ಲಾ ರೆಡಿ ಇದೆ, ಅದರಲ್ಲಿ ಏನೂ ತೊಂದರೆ ಇಲ್ಲ.

ಶ್ರೀ ಜೆ.ಆರ್. ಲೋಬೋ:– ಮಾನ್ಯ ಅಧ್ಯಕ್ಷರೆ, ಅರಣ್ಯ ಇಲಾಖೆಯಿಂದ ಜಾಗವನ್ನು ಇನ್ನೂ ತೆಗೆದುಕೊಂಡಿಲ್ಲ. ಆ ಮಾಹಿತಿ ಸರಿಯಿಲ್ಲ. ಅಲ್ಲಿ ಜಾಗ ಯಾವಾಗ ಸಿಗುತ್ತದೆ ಎನ್ನುವ ಹೆದರಿಕೆ ಇದೆ.

ಅಧ್ಯಕ್ಷರು:– ಅಲ್ಲಿ ಯಾವುದಾದರೂ ಒಂದು ಜಾಗ ಕೊಡಿಸಿ. ಲೋಬೋ ನಾನು ಹೇಳುತ್ತೇನೆ ಕೇಳಿ. ಬೇಗ ಆಗಬೇಕೆನ್ನುವುದಾದರೆ ಅರಣ್ಯ ಇಲಾಖೆಯದು ಬಿಟ್ಟುಬಿಡಿ. ಆ ಶನಿಯನ್ನು ಬೆನ್ನು ಹತ್ತಿಕೊಳ್ಳುವುದಕ್ಕೆ ಹೋಗಬೇಡಿ. ಇನ್ನು ಬೇರೆ ಕಡೆ ಎಲ್ಲಾದರೂ ಇದ್ದರೆ ಬೇಗ ಕೊಡಿಸಿ.

ಶ್ರೀ ವಿ. ಶ್ರೀನಿವಾಸ್ ಪ್ರಸಾದ್:– Development corporationಗೆ ಕೊಡುತ್ತಾರೆ. ನಾನು ಆದಷ್ಟು ಬೇಗ ಮಂಜೂರು ಕೊಡಿಸುತ್ತೇವೆ.

ಶ್ರೀ ಜೆ.ಆರ್. ಲೋಬೋ:– ಮಾನ್ಯ ಸಚಿವರು ತುರ್ತಾಗಿ ಆ ಜಾಗವನ್ನು ತೆಗೆದುಕೊಳ್ಳಬೇಕು.

ಶ್ರೀ ಸಿ.ಎನ್. ಬಾಲಕೃಷ್ಣ:– ಮಾನ್ಯ ಅಧ್ಯಕ್ಷರೆ, ನೀರಾವರಿ ಸಚಿವರು ಇಲ್ಲ, ನಮ್ಮ ಹಾಸನ ಜಿಲ್ಲೆಯ ಉಸ್ತುವಾರಿ ಸಚಿವರಾದ ಮಹದೇವಪ್ಪನವರು ಇದ್ದಾರೆ, ಅವರನ್ನು ಕೇಳಿ.

ಅಧ್ಯಕ್ಷರು:– ಸಚಿವರು ಇಲ್ಲವಲ್ಲ. ಇದನ್ನು ನಾಳೆ ಹಾಕೋಣ.

ಶ್ರೀ ಸಿ.ಎನ್. ಬಾಲಕೃಷ್ಣ:– ನಾಳೆ ಅವಕಾಶ ಇರುತ್ತದೆಯೇ?

ಅಧ್ಯಕ್ಷರು:– ನಾಳೆಗೆ ಹಾಕೋಣ.

ಬಯೋಮೆಟ್ರಿಕ್ ಅಳವಡಿಸುವುದು

229(3472); ಶ್ರೀ ಸುನೀಲ್ ಕುಮಾರ್ ವಿ (ಕಾರ್ಕಳ)

ಅ) ರಾಜ್ಯ ಸರ್ಕಾರಿ ಕಛೇರಿಯ ನೌಕರರ ಹಾಜರಾತಿಯ ಪರಿಶೀಲನೆಗಾಗಿ ಬಯೋಮೆಟ್ರಿಕ್ ತಂತ್ರಾಂಶವನ್ನು ಕಡ್ಡಾಯಗೊಳಿಸಿ ಎಲ್ಲಾ ಕಛೇರಿಗಳಲ್ಲೂ ಸಂಬಂಧಿಸಿದ ಉಪಕರಣಗಳನ್ನು ಅಳವಡಿಸಲು ಸಾಕಷ್ಟು ಅನುದಾನವನ್ನು ವೆಚ್ಚ ಮಾಡಿದ್ದರೂ ಕಾರ್ಕಳ ತಾಲ್ಲೂಕು ಕಛೇರಿಯ ಬಯೋಮೆಟ್ರಿಕ್ ವ್ಯವಸ್ಥೆಯು ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸ್ಥಗಿತಗೊಂಡಿದ್ದಲ್ಲಿ, ಹಾಜರಾತಿಯ ಪರಿಶೀಲನೆಯನ್ನು ಯಾವ ರೀತಿ ಮಾಡಲಾಗುತ್ತಿದೆ;

ಇ) ನಿಯಮಾನುಸಾರ ಬಯೋಮೆಟ್ರಿಕ್ ತಂತ್ರಾಂಶಕ್ಕೂ ಹೆಚ್.ಆರ್.ಎಂ.ಎಸ್ ತಂತ್ರಾಂಶಕ್ಕೂ ಸಂಬಂಧ ಕಲ್ಪಿಸಿಲ್ಲವೇ ? (ವಿವರ ನೀಡುವುದು)

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಮಾನ್ಯ ಕಂದಾಯ ಸಚಿವರು)

ಅ) ಉಡುಪಿ ಜಿಲ್ಲೆಯ ಜಿಲ್ಲಾಧಿಕಾರಿಯವರ ಕಛೇರಿ, ಉಪ ವಿಭಾಗಾಧಿಕಾರಿಗಳ ಕಛೇರಿ, ಹಾಗೂ ಎಲ್ಲಾ ತಾಲ್ಲೂಕು ಕಛೇರಿಗಳಲ್ಲಿ